ಇನ್ನು ಎಲ್ಲಿ ಕುಡಿಯುವ ನೀರಿಗೆ ಅವಶ್ಯಕತೆ ಇದೆ. ಅಲ್ಲೆಲ್ಲಾ ಕೂಡ ಡೆಪ್ಯುಟಿ ಕಮೀಷನರ್‌ಮುಖಾಂತರ ನೀರಿನ ವ್ಯವಸ್ಥೆ ಮಾಡಿಸಿಕೊಡುತ್ತೇವೆಂದು ಹೇಳುತ್ತೇನೆ.

ಶ್ರೀ ಎನ್. ಜಿ. ನಾಯಕ್:- ಕುಡಿಯುವ ನೀರಿನದ್ದು ಆಯಿತು. ಇನ್ನು ಅವರಿಗೆ ಬೇರೆ ಏನು ಪರಿಹಾರ ಮಾಡುತ್ತೀರೆಂಬುದನ್ನು ನಾನು ಕೇಳುತ್ತಿದ್ದೇನೆ. ಅದಕ್ಕೆ ಉತ್ತರಕೊಡಬೇಕು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ಇಲ್ಲಿಯವರಿಗೆ ಏನಾಗಿತ್ತು ಅಂದರೆ ಕೆಲವು ಕಾವುಗಾರಿಗಳಿಗೆ ಜಿಲ್ಲಾಪರಿಷತ್ತಿನಲ್ಲಿ ಇನ್ನು ಕೆಲಸ ಬಾಬಿನ ಹಣವನ್ನು ಸೆಪ್ಟೆಂಬರ್,ಅಕ್ಟೋಬರ್‌ನವರೆಗೂ ಬಿಡುಗಡೆ ಮಾಡಿರಲಿಲ್ಲ. ಆದರೆ ಮೊನ್ನೆ ಫೆಬ್ರವರಿಯಲ್ಲಿ ಸಾಕಷ್ಟು ಹಣವನ್ನು ನಾನು ರೂರಲ್ ಡೆವಲೆಪ್‌ಮೆಂಟ್‌ನಲ್ಲಿ ಬಿಡುಗಡೆ ಮಾಡಿದ್ದೇವೆ. ತಮ್ಮ ತಾಲ್ಲೂಕಿಗೂ ಸಾಕಷ್ಟು ಹಣವನ್ನು ಈ ಜವಹರ್ ರೋಜ್‌ಗಾರ್ ಯೋಜನೆಯಲ್ಲಾಗಲಿ, ಅಥವಾ ರೋಡ್ಸ್ ಬ್ರಿಡ್ಜ್‌ಗೂ ಬಿಡುಗಡೆ ಮಾಡಿದ್ದೇವೆ. ಈ ಹಣದ ಪ್ರಯೋಜನ ಈ ಸ್ಕೇರ್‌ಸಿಟಿ ಕೆಲಸದಲ್ಲಿ ಆಗುತ್ತದೆ ಎನ್ನತಕ್ಕ ಮಾತನ್ನು ಹೇಳುತ್ತೇನೆ.

ಶ್ರೀ ಎಂ. ವಿ. ವೆಂಕಟ್ಟಪ್ಪ:- ಜವಹರ್ ರೋಜ್‌ಗಾರ್ ಯೋಜನೆಯಲ್ಲಿ ಮಾನ್ಯ ಮಂತ್ರಿಗಳು ಹೇಳಿದ್ದರು. ಅಲ್ಲಿ ಏನಾಗಿದೆ ಅಂದರೆ ಸುಮಾರು ಕೋಟ್ಯಾಂತರ ರೂಪಾಯಿಗಳ ಬಿಲ್‌ಗಳು ಪೆಂಡಿಂಗ್ ಇದೆ ಎಂದು ಹೇಳಿ ಇಲ್ಲಿ ಹಣವನ್ನು ಬಿಡುಗಡೆ ಮಾಡುತ್ತಿಲ್ಲ. ಅದನ್ನು ಅಡ್ಜಸ್ಟ್ ಮಾಡಿಕೊಳ್ಳುವುದಕ್ಕೆ ಸೆಕ್ರೆಟರಿಗಳು ಲಡ್ಮಿನಿಸ್ಟ್ರೇಟರ್‌ಗಳು ತಯಾರಿದ್ದಾರಾ? ಅದರ ಬಗ್ಗೆ ಏನು ಕಾರ್ಯಕ್ರಮವನ್ನು ಕೈಗೊಂಡಿದ್ದೀರಿ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ತಾವು ಪ್ರತ್ಯೇಕವಾಗಿ ಆರ್. ಡಿ.ಪಿ.ಆರ್. ಮಿನಿಸ್ಟರ್ ಹತ್ತಿರ ಈ ಪ್ರಶ್ನೆಯನ್ನು ಕೇಳಿದರೆ ಅದಕ್ಕೆ ಅವರು ಉತ್ತರಕೊಡುತ್ತಾರೆ.

ಪಶುಸಂಗೊಪನಾ ಇಲಾಖೆಯಲ್ಲಿನ ಪರಿಶಿಷ್ಟ ಜಾತಿ/ವರ್ಗದ ಅಧಿಕಾರಿಗಳಿಗೆ ಬಡ್ತಿ.

448 (2198) ಶ್ರೀಮತಿ ಪೋಟಮ್ಮ (ಮೂಡಿಗೆರೆ)

ಪಶುಸಂಗೊಪನೆ ಮತ್ತು ಪಶುವೈದ್ಯ ಸೇವಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಪಶುಸಂಗೋಪನಾ ಇಲಾಖೆಯಲ್ಲಿ ಸಹಾಯಕ ನಿರ್ದೇಶಕರ ಹುದ್ದೆಯಿಂದ ಉಪನಿರ್ದೇಶಕರ ಹುದ್ದೆಗೆ ರೋಸ್ಟರ್ ಅನ್ವಯ ಪರಿಶಿಷ್ಟ ಜಾತಿಗೆ ಮತ್ತು ವರ್ಗದ ಅಧಿಕಾರಿಗಳಿಗೆ ಬಡ್ತಿ ನೀಡುವ ಪ್ರಸ್ತಾವ ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಪ್ರಸ್ತಾವನೆ ಬಂದಿದ್ದಲ್ಲಿ ಇನ್ನೂ ಬಡ್ತಿ ನೀಡದೇ ಇರುವುದಕ್ಕೆ ಕಾರಣಗಳೇನು?

ಶ್ರೀ ಬಸವರಾಜ್ ಪಾಟೀಲ್ (ಪಶುಸಂಗೋಪನೆ ಮತ್ತು ಪಶುವೈದ್ಯ ಸೇವಾ ಸಚಿವರು):-

ಅ) ಸಹಾಯಕ ನಿರ್ದೇಶಕರ ಹುದ್ದೆಯಿಂದ ಉಪನಿರ್ದೇಶಕರ ಹುದ್ದೆಗೆ ರೋಸ್ಟರ್ ಪದ್ಧತಿಯ ಮೇಲೆ ಬಡ್ತಿ ನೀಡುವುದು ಪರಿಶೀಲನೆಯಲ್ಲಿದೆ. ಇನ್ನೂ ಅಂತಿಮ ತೀರ್ಮಾನ ತೆಗೆದುಕೊಂಡಿರುವುದಿಲ್ಲ.

ಆ) ಉದ್ಭವಿಸುವುದಿಲ್ಲ.

ಶ್ರೀಮತಿ ಪೋಟಮ್ಮ:- ಮಾನ್ಯ ಮಂತ್ರಿಗಳು ನನ್ನ ಪ್ರಶ್ನೆಗೆ ಉತ್ತರವಾಗಿ ಇದು ಇನ್ನೂ ಅಂತಿಮ ತೀರ್ಮಾನವನ್ನು ತೆಗೆದುಕೊಂಡಿಲ್ಲ ಅಂತ ಹೇಳುತ್ತಾರೆ. ಇದು ಎಷ್ಟು ವರ್ಷದಿಂದ ಸರ್ಕಾರದ ಪರಿಶೀಲನೆಯಲ್ಲಿದೆ? ಇದರ ಬಗ್ಗೆ ತೀರ್ಮಾನ ತೆಗೆದುಕೊಳ್ಳಲಿಕ್ಕೆ ಇನ್ನು ಎಷ್ಟು ತಿಂಗಳುಗಳು ಬೇಕೆನ್ನುವುದನ್ನು ಸ್ಪಷ್ಟಪಡಿಸಬೇಕು.

ಶ್ರೀ ಬಸವರಾಜ್ ಪಾಟೀಲ್:- ಇದು ನಿಯಮದ ಪ್ರಕಾರ ಅಸಿಸ್ಟೆಂಟ್ ಡೈರೆಕ್ಟರ್‌ರಿಂದ ಡೆಪ್ಯೂಟಿಡೈರೆಕ್ಟರ್‌ರವರಗೆ ಪ್ರಮೋಷನ್ ಮಾಡುವುದು ಸಧ್ಯದಲ್ಲಿ ನಮ್ಮ ಕಾನೂನಿನ ಪ್ರಕಾರ ಇಲ್ಲ. ಅದಕ್ಕಾಗಿ ಡಿಪಿಎಆರ್‌ಗೆ ಕಳುಹಿಸಬೇಕು. ಮುಂದೆ ಆ ನಿಯಮವನ್ನು ಬದಲಾವಣೆ ಮಾಡಬೇಕಾಗುತ್ತದೆ. ಅದಕ್ಕಾಗಿ ಸರ್ಕಾರದ ವಿಚಾರದಲ್ಲಿದೆ. ಯಾವ ರೀತಿಯಿಂದ ಮಾಡಬೇಕೆಂದು ವಿಚಾರ ಮಾಡುತ್ತಿದ್ದೇವೆ. ನಿರ್ದಿಷ್ಟವಾಗಿ ಇಷ್ಟೇ ಸಮಯದಲ್ಲಿ ಅಂದರೆ ಒಂದು ತಿಂಗಳಲ್ಲಿ ಅಥವಾ ಎರಡು ತಿಂಗಳಲ್ಲಿ ಆಗುತ್ತದೆಂದು ಹೇಳುವುದಕ್ಕಾಗುವುದಿಲ್ಲ. ನಾನು ಕೂಡ ರಿಸರ್ವೇಷನ್ ಸಿಗಬೇಕೆಂದು ಇಚ್ಛೆಪಡುವವನಾಗಿದ್ದೇನೆ. ಆದಷ್ಟು ಬೇಗನೆ ಇದನ್ನು ಪರಿಶೀಲಿಸಲಾಗುವುದೆಂದು ಮಾನ್ಯ ಸದಸ್ಯರಿಗೆ ತಮ್ಮ ಮೂಲಕ ಹೇಳುತ್ತೇನೆ.

ಶ್ರೀಮತಿ ಮೋಟಮ್ಮ:- ಎರಡನೆಯದರಲ್ಲಿ ಪ್ರಸ್ತಾವನೆ ಬಂದಿದ್ದಲ್ಲಿ ಇನ್ನೂ ಬಡ್ತಿ ನೀಡದೇ ಇರುವುದಕ್ಕೆ ಕಾರಣ ಏನೆಂದು ಕೇಳಿದ್ದೇನೆ. ಇದು ಎಪಿಎಆರ್‌ಗೆ 18-12-90ಕ್ಕೆ ಹೋಗಿ ಬಂದಿದೆ. ಈ ಫೈಲು ಮಾನ್ಯ ಮಂತ್ರಿಗಳ ಕಡೆ ಇದೆ ಎಂದು ನನ್ನ ಗಮನಕ್ಕೆ ಬಂದಿದೆ. ಈ ಹರಿಜನ ಗಿರಿಜನರಿಗೆ ಬಡ್ತಿಯಲ್ಲಿ ಅನ್ಯಾಯವಾಗದ ಹಾಗೆ ಆದಷ್ಟು ಜಾಗ್ರತೆ ಇದನ್ನು ಪರಿಶೀಲನೆಮಾಡಿ ಒಂದು ತಿಂಗಳಲ್ಲೇ ಇವರಿಗೆ ಪ್ರಮೋಷನ್ ಕೊಡಲಿಕ್ಕೆ ಪ್ರಯತ್ನ ಮಾಡುತ್ತೀರಾ?

ಶ್ರೀ ಬಸವರಾಜ್ ಪಾಟೀಲ್:- ನನಗೆ ತಿಳಿದ ಮಟ್ಟಿಗೆ ಈ ಫೈಲು ಡಿಪಿಎಆರ್‌ಗೆ ಇನ್ನೂ ಹೋಗಿಲ್ಲ, ಸೆಕ್ರೆಟರಿಯ ಲೆವೆಲ್‌ನಲ್ಲಿ ಚರ್ಚೆಯಲ್ಲಿದೆ. ಏಕೆಂದರೆ ಕಾನೂನನ್ನು ಬದಲಾವಣೆ ಮಾಡಬೇಕಾಗಿದೆ. ಅದಕ್ಕಾಗಿ ಯಾವ ರೀತಿ ಮಾಡಬೇಕು ಎಂಬ ಬಗ್ಗೆ ಆದಷ್ಟು ಬೇಗನೆ ವಿಚಾರಮಾಡಿ ಇದನ್ನು ಪರಿಶೀಲಿಸಲಾಗುವುದೆಂದು ನಾನು ಹೇಳುತ್ತೇನೆ.

ನೆಲಮಂಗಲ ಮತಕ್ಷೇತ್ರದಲ್ಲಿರುವ ವ್ಯವಸಾಯದ ಜಮೀನಿನ ಬಗ್ಗೆ.

449 (1564)ಶ್ರೀ ಅಂಜನಮೂರ್ತಿ (ನೆಲಮಂಗಲ)

ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ:-

ಅ) ನೆಲಮಂಗಲ ಮತಕ್ಷೇತ್ರದಲ್ಲಿ ಒಟ್ಟು ಎಷ್ಟು ವ್ಯವಸಾಯ ಕ್ಷೇತ್ರಗಳಿವೆ. ಅದರಲ್ಲಿ ಒಟ್ಟು ಎಷ್ಟು ಎಕರೆ ಜಮೀನಿರುವುದು (ಹೋಬಳಿ ಮತ್ತು ಗ್ರಾಮವಾರು ವಿವರ ನೀಡುವುದು);

ಆ) ಅವುಗಳ ಅಭಿವೃದ್ಧಿಗೆ ಸರ್ಕಾರವು ಕೈಗೊಂಡಿರುವ ಕ್ರಮಗಳೇನು?

ಶ್ರೀ ಎನ್. ಚಿಕ್ಕೇಗೌಡ(ಕೃಷಿ ಸಚಿವರು)-

ಅ) ನೆಲಮಂಗಲ ಮತಕ್ಷೇತ್ರದಲ್ಲಿ ಯಾವುದೇ ವ್ಯವಸಾಯ ಕ್ಷೇತ್ರಗಳಿರುವುದಿಲ್ಲ.

ಆ) ಉದ್ಭವಿಸುವುದಿಲ್ಲ.

ಶ್ರೀ ಅಂಜನಮೂರ್ತಿ:- ನನ್ನ ಪ್ರಶ್ನೆ ಏನೆಂದರೆ ನೆಲಮಂಗಲ ಮತಕ್ಷೇತ್ರದಲ್ಲಿ ಒಟ್ಟು ಎಷ್ಟು ವ್ಯವಸಾಯ ಕ್ಷೇತ್ರಗಳಿವೆ. ಅದರಲ್ಲಿ ಒಟ್ಟು ಎಷ್ಟು ಜಮೀನಿರುವುದು(ಹೋಬಳಿ ಮತ್ತು ಗ್ರಾಮವಾರು ವಿವರ ನೀಡುವುದು)ಎಂಬುದಾಗಿ. ಅದಕ್ಕೆ ಉತ್ತರದಲ್ಲಿ ನೆಲಮಂಗಲ ಮತಕ್ಷೇತ್ರದಲ್ಲಿ ಯಾವುದೇ ವ್ಯವಸಾಯ ಕ್ಷೇತ್ರಗಳು ಇರುದಿಲ್ಲವೆಂದು ಹೇಳಿದ್ದಾರೆ. ಇದರಲ್ಲಿ ನನ್ನ ಮತ ಕ್ಷೇತ್ರಕ್ಕೆ ಸೇರಿರುವ ದಾಸನಪುರ ಹೋಬಳಿ ಅಡಕಮಾರನಹಳ್ಳಿ ಎಂಬ ಗ್ರಾಮದಲ್ಲಿ ಸುಮಾರು 15-20 ಎಕರೆಯನ್ನು ಸುಮಾರು15-20 ವರ್ಷಗಳಿಂದ ಕಾಯ್ದಿರಿಸಲಾಗಿದೆ. ಅದಕ್ಕೆ ಈಗಾಗಲೇ ಸಾವಿರಾರು ರೂಪಾಯಿಯನ್ನು ಖರ್ಚುಮಾಡಿದ್ದಾರೆ. ಮೆಣಸಿನಕಾಯಿ ಹಾಕಿದ್ದಾರೆ. ಬೋರ್‌ವೆಲ್ ಹಾಕಿದ್ದಾರೆ. ಈಗ ಆ ಜಮೀನಿನಲ್ಲಿ ಕೆಲವು ಪಟ್ಟಭದ್ರಹಿತಾಸಕ್ತಿಗಳು ಒತ್ತುವರಿ ಮಾಡಿಕೊಂಡು 5-6